## ವಿದ್ಯಾರ್ಥಿಪ್ರಭ

# ಕಣ್ಣು ತೆರೆಸಿದ ವಸ್ತುಪ್ರದರ್ಶನ

**ಶಾ**ಲೆ ಮುಗಿದೊಡನೆ ಗಣೇಶ ಮನೆಗೆ ಓಡಿಬಂದನು. ನೇರ ಬಚ್ಚಲ ಮನೆಗೆ ಹೋಗಿ, ಮುಖ ತೊಳೆದು, ಕಾಫಿ ಕುಡಿದು ಅಪ್ಪನ ಪಕ್ಕದಲ್ಲಿ ಬಂದು ನಿಂತ. "ಅಪ್ಪಾ, ಒಂದು ವಸ್ತುಪ್ರದರ್ಶನ ಬಂದಿದೆ. ಅದರ ಹೆಸರು **'ನಾಗರಿಕತೆಗಳ ನೋಟ'** ಎಂದು. ಅಪ್ಪಾ, ಇವತ್ತು ಕರೆದುಕೊಂಡು ಹೋಗ್ತೀಯಾ?" ಮಗನ ಕಾತುರತೆಯನ್ನು ಕಂಡು ತಂದೆ ಶ್ರೀಧರ "ನಡಿ" ಎಂದವರೇ, ಬಟ್ಟೆ ಹಾಕಿಕೊಳ್ಳಲು ಹೋದರು. ಅವರು ಬರುವಷ್ಟರಲ್ಲಿ ಸ್ಕೂಟರಿನ ಮುಂದೆ, ಹೊಸ ಬಟ್ಟೆ ಹಾಕಿಕೊಂಡು ನಿಂತೇಬಿಟ್ಟಿದ್ದ, ಗಣೇಶ.

### ನಾಗರಿಕತೆಗಳ ನೆಲೆ

ವಸ್ತುಪ್ರದರ್ಶನದಲ್ಲಿ ಒಂದು ದೊಡ್ಡ ಭಾಗ. ಒಳಗೆ ಹೋದಾಗ, ಎಲ್ಲೆಲ್ಲಿಯೂ ಕಾರ್ಗತ್ತಲು. ದೂರದಲ್ಲಿ ಎಲ್ಲಿಯೋ ಸಣ್ಣ ಮಿಣುಕು ಬೆಳಕು. ಅದರ ಕಡೆ ಸಾಗಿದಾಗ ಅಲ್ಲೊಂದು ಬೋರ್ಡ್ ಕಾಣಿಸಿತು: **"ಸ್ವತಂತ್ರ ಚಿಂತಕರ ಪ್ರಪಂಚ."** ಬೆಳಕು ದೊಡ್ಡದಾಗುತ್ತ ಹೋಯಿತು. ದೊಡ್ಡ ಪರದೆ. ಅಲ್ಲಿ ಒಂದು ದೊಡ್ಡ ನಗರ. ಆನಂದದ ವಾತಾವರಣ. ಬಿಳಿಯ ಗಡ್ಡ, ನರೆತ ಕೂದಲುಗಳಿಂದ ಕೂಡಿ, ನಿಲುವಂಗಿ ಹಾಕಿಕೊಂಡ ವಿದ್ವಾಂಸರು ಗುಂಪುಗಳಲ್ಲಿ ಬೋಧನೆ ಮಾಡುತ್ತಿದ್ದರು. ಅವರ ಸುತ್ತ ಯುವಕರು ನೆರೆದು ಕೇಳುತ್ತಿದ್ದರು. ಕೆಲವು ಕಡೆ ಬಿಸಿ ಬಿಸಿ ಚರ್ಚೆ ಕೂಡ ನಡೆಯುತ್ತಿತ್ತು. ಇದು ಹಳೆಯ ಗ್ರೀಸ್ ದೇಶದ ಚಿತ್ರಣ ಎಂದು ಗಣೇಶನಿಗೆ ಗೊತ್ತಾಯಿತು. ಈಗ ಅವರು ದ್ವೀಪದ ಒಳಗೆ ಪ್ರವೇಶಿಸುತ್ತಿದ್ದಾರೆ. ಅಲ್ಲೊಂದು ದೊಡ್ಡ ಕೋಟೆ. ಕೋಟೆಯ ಒಳಗಡೆ ಭವ್ಯವಾದ ದೇವಸ್ಥಾನ. ದೇವಸ್ಥಾನದ ಮೆಟ್ಟಿಲುಗಳ ಮೇಲೆ ಕುರೂಪಿಯಾಗಿದ್ದ ವೃದ್ಧನೊಬ್ಬ ಕುಳಿತಿದ್ದ. ಅವನ ಸುತ್ತಲೂ ಯುವಕರು. ಅವರೆಲ್ಲರೂ ಅವನು ಹೇಳುವುದನ್ನೇ ಗಮನವಿಟ್ಟು ಕೇಳುತ್ತಿದ್ದರು. ಅವನೇ **ಸಾಕ್ರಟಿಸ್!** ದೇವಸ್ಥಾನದ ಹಿಂದೆ ದೊಡ್ಡದೊಂದು ಕ್ರೀಡಾಂಗಣ. ಅಲ್ಲಿನ ಒಂದು ಬೋರ್ಡಿನಲ್ಲಿ **'ಒಲಂಪಿಯಾ'** ಎಂದು ಬರೆದಿತ್ತು.

ಗಣೇಶ ಮತ್ತು ಅವನ ತಂದೆ ಮತ್ತೊಂದು ದೊಡ್ಡ ಹಜಾರವನ್ನು ಪ್ರವೇಶಿಸಿದರು. ಅದೋ ಅಲ್ಲಿ ಒಂದು ದೊಡ್ಡ ಪ್ರಯೋಗಶಾಲೆ. ಎಷ್ಟೊಂದು ಜನ ವಿಜ್ಞಾನಿಗಳು, ನೂರಾರು ಪ್ರಯೋಗಗಳನ್ನು ಮಾಡುತ್ತಿದ್ದಾರೆ! ನಂತರ ಅವರು ಒಂದು ವಿಸ್ತಾರವಾದ ರಸ್ತೆಗೆ ಬಂದರು. ಅಲ್ಲೆಲ್ಲೂ ವೈಭವ, ಸಂಗೀತ, ಕುಣಿತ! ಇದು **ರೋಮ್!** ಎಂದು ಪಿಸುಗುಟ್ಟಿದ ಗಣೇಶ. ಎಲ್ಲಿ ಕಣ್ಣುಹಾಯಿಸಿದರೂ ಅಲ್ಲಿ ಸೈನಿಕರು, ಶಿಲಾಕೃತಿಗಳು, ವಿವಿಧ ಬಗೆಯ ಉಡುಗೆತೊಡುಗೆಗಳು. ಆಹಾ, ಒಂದೇ ಎರಡೇ!

ಅದನ್ನು ದಾಟಿ, ಚಿಕ್ಕದೊಂದು ಬಾಗಿಲಿನ ಮೂಲಕ ಒಳಗೆ ಹೋದರೆ, ಎಲ್ಲೆಲ್ಲೂ ಮರಳು. ಮರಳಿನ ಮಧ್ಯದಲ್ಲಿಯೇ ಸಾವಿರಾರು ಗುಲಾಮರು ಪಿರಮಿಡ್‌ಗಳನ್ನು ಕಟ್ಟುತ್ತಿದ್ದಾರೆ. ಅಪ್ಪ ಹೇಳಿದರು, "ಗಣೇಶ, ಇದು **ಈಜಿಪ್ಟ್.** ಅದೋ ನೋಡು, ಅಲ್ಲಿ ಕಾಣುವುದೇ ನೈಲ್ ನದಿ. ಇತ್ತ ಕಾಣುವುದೇ ಗಿಜಾದ ದೊಡ್ಡ ಪಿರಮಿಡ್."

ನಂತರ ಬಂದಾಗ ದೊಡ್ಡ ನಗರ ಕಾಣಿಸಿತು. ಎತ್ತಿನ ಗಾಡಿಗಳಲ್ಲಿ ಜನ ಹೋಗಿಬಂದು ಮಾಡುತ್ತಿದ್ದರು. ವ್ಯವಹಾರಕ್ಕಾಗಿ ಮುದ್ರೆಗಳನ್ನು ಉಪಯೋಗಿಸುತ್ತಿದ್ದರು. ಎಲ್ಲೆಲ್ಲೂ ಸ್ವಚ್ಛತೆ, ಅಚ್ಚುಕಟ್ಟುತನ. ದೂರದಲ್ಲೊಂದು ನದಿ ಹರಿಯುತ್ತಿತ್ತು. "ಇದು ಹರಪ್ಪಾ ಮೊಹೆಂಜಾದಾರೋ – **ಸಿಂಧೂ ಸಂಸ್ಕೃತಿ"** ಎಂದು ಪಿಸುಗುಟ್ಟಿದ ಗಣೇಶ.

### ಧರ್ಮಪ್ರಪಂಚ

ನಾಗರಿಕ ಪ್ರಪಂಚವನ್ನು ನೋಡಿಕೊಂಡು, ಹೊರಗೆ ಬಂದಾಗ ಇನ್ನೊಂದು ಬಿಡಾರ ಕಾಣಿಸಿತು. ಅದರ ಮೇಲೆ **'ಧರ್ಮಪ್ರಪಂಚ'** ಎಂದು ಬರೆದಿತ್ತು. ಅದರೊಳಗೆ ಹೋದಾಗ, ಅದರ ಮೊದಲ ಕೊಠಡಿಯೇ ಒಂದು ಹಳೆಯ ದೇವಮಂದಿರವಾಗಿತ್ತು. ಅಲ್ಲಿ ದೊಡ್ಡ ಗಡ್ಡ ಬಿಟ್ಟ, ಮುದುಕನೊಬ್ಬ ಜನರಿಗೆ ಉಪದೇಶ ಕೊಡುತ್ತಿದ್ದ. ಗರ್ಭಮಂದಿರದಲ್ಲಿ ಟೆಬರ್‌ನಿಕಲ್ ಎಂಬ ಚಿನ್ನದ ಪ್ರತಿಕೃತಿಯನ್ನು ಇರಿಸಲಾಗಿತ್ತು. ಅಪ್ಪ ಹೇಳಿದರು, **"ಇದು ಯಹೂದಿಗಳ ದೇವಸ್ಥಾನ."** ಅಲ್ಲಿನ ಜನ ಮುಗ್ಧರು, ಸಂತೋಷವಾಗಿದ್ದರು. ಅವರ ಕುಟುಂಬಗಳಲ್ಲಿ ಅನ್ಯೋನ್ಯತೆ ಇತ್ತು.

ಅಲ್ಲಿಂದ ಮುಂದೆ ಹೋದಾಗ, ಒಬ್ಬ ಬೋಳು ತಲೆಯ ಸಂನ್ಯಾಸಿ ಕಾಣಿಸಿಕೊಂಡರು. ಅವರು ಭಿಕ್ಷಾಪಾತ್ರೆಯನ್ನು ಕೈಯಲ್ಲಿ ಹಿಡಿದಿದ್ದರು. ಅವರ ಮುಖದಲ್ಲಿ ಅಹಿಂಸೆ, ಶಾಂತಿ ಮತ್ತು ಪ್ರೇಮಗಳು ಹೊರಸೂಸುತ್ತಿದ್ದವು. ಅವರು ಹೋದೆಡೆಯಲ್ಲ, ನೂರಾರು ಜನ ಸಂನ್ಯಾಸಿಗಳು, ಗೃಹಸ್ಥರು ಹಿಂಬಾಲಿಸುತ್ತಿದ್ದರು. ಭಿಕ್ಷೆ ಬೇಡಿದ ಮೇಲೆ ಆ ಭಿಕ್ಷು ಒಂದು ಮರದ ಕೆಳಗೆ ಕುಳಿತು ಬೋಧನೆ ಮಾಡಿದರು. ಜನರೆಲ್ಲ ಅದನ್ನು ಆಲಿಸುತ್ತಿದ್ದರು. ಗಣೇಶ ಉದ್ಗರಿಸಿದ, **"ಅಪ್ಪಾ, ಇವನು ಭಗವಾನ್ ಬುದ್ಧ."**

ಮುಂದೆ ಹೋದಾಗ, ಒಂದು ಸಣ್ಣ ಗುಡ್ಡ. ಅದರ ತುದಿಯಲ್ಲಿ ದಿವ್ಯ ಬೆಳಕು. ಏನೆಂದು ನೋಡಿದರೆ, ಸೊಂಟಕ್ಕೊಂದು ಬಟ್ಟೆ ಕಟ್ಟಿಕೊಂಡಿರುವ, ಕೃಶಕಾಯದ ತೇಜಸ್ವೀ ಪುರುಷ. ಅಯ್ಯೋ, ಅವನನ್ನು ಶಿಲುಬೆಗೆ ಹಾಕಿದ್ದಾರೆ. ಕೈಕಾಲುಗಳಿಗೆ ಮೊಳೆಗಳನ್ನು ಹೊಡೆದಿದ್ದಾರೆ. ಆದರೂ ಅವನ ಮುಖ ಪ್ರಶಾಂತವಾಗಿತ್ತು. ಅಪ್ಪ ಅವನನ್ನು ನೋಡುತ್ತಲೇ ಹೇಳಿದರು, **"ಮಗೂ, ಇವನೇ ಜಗತ್ತಿನ ಜನರ ಪಾಪಗಳನ್ನು ಕಳೆಯಲು ತಾನಾಗಿ ಕಷ್ಟಪಟ್ಟ ಪ್ರಭು ಏಸುಕ್ರಿಸ್ತ."**

ನಂತರ ಅವರು ನೋಡಿದ್ದು, ದೊಡ್ಡದೊಂದು ಚರ್ಚ್ ಅನ್ನು. ನೂರಾರು ಪಾದ್ರಿಗಳು ಅಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಎಲ್ಲೆಲ್ಲೂ ಪವಿತ್ರ ವಾತಾವರಣ. ಅಲ್ಲಿನ ಬೋರ್ಡ್ ಮೇಲೆ ಬರೆದಿತ್ತು. **"ಇದು ವ್ಯಾಟಿಕನ್. ಜಗತ್ತಿನ ಕ್ರೈಸ್ತರಿಗೆಲ್ಲ ಅತಿ ಪವಿತ್ರ ಸ್ಥಾನ."**

ಅಲ್ಲಿಂದ ಮುಂದೆ ಬಂದಾಗ ಕೇಳಿಸಿದ್ದು, ಸಾವಿರಾರು ಕುದುರೆಗಳ ಖುರಪುಟ ಶಬ್ದ. **"ಟೀನ್, ಟೀನ್... ಜಿಹಾದ್ ಜಿಹಾದ್"** ಎಂಬ ಕೂಗು ಕೇಳಿಸಿತು. ಸಾವಿರಾರು ಯೋಧರು ಧರ್ಮಯುದ್ಧ

ಮಾತಲು ಹೋಗುತ್ತಿದ್ದಾರೆ. ಅದೊ, ಅಲ್ಲೊಂದು ಕಪ್ಪಗಿರುವ ದೊಡ್ಡ ಶಿಲೆ. ಅವರ ಪಕ್ಕದಲ್ಲಿ ಹಸಿರು ನಿಲುವಂಗಿ ಧರಿಸಿರುವ ಪ್ರವಾದಿ. ಅವರ ಮುಖದಲ್ಲಿ ದಿವ್ಯ ಜ್ಯೋತಿ. ಅವರ ತುಟಿಗಳ ಮೇಲೆ ದಿವ್ಯ ಮಂದಹಾಸ. ನೆರೆದಿದ್ದ ಸಾವಿರಾರು ಜನರಿಗೆ ಅವರು ಭಗವಂತನಿಗೆ ವಿಧೇಯರಾಗಿರಿ ಎಂದು ಉಪದೇಶ ಮಾಡುತ್ತಿದ್ದಾರೆ. **"ಇವರೇ ಅಲ್ವಾ ಅಪ್ಪಾ, ಪ್ರವಾದಿ ಮುಹಮ್ಮದರು"** ಎಂದ ಗಣೇಶ.

ಇನ್ನೊಂದು ಬಾಗಿಲನ್ನು ಸಾಗಿ ಹೋದಾಗ, ಎಲ್ಲೆಡೆ ಚೀನೀ ಜನರು. ಅವರ ಮಧ್ಯೆ, ಸಾಮಾನ್ಯ ಮನುಷ್ಯನಂತೆ ಕಾಣುವ ವ್ಯಕ್ತಿಯೊಬ್ಬ ಜನರಿಗೆ ನೀತಿಬೋಧನೆ ಮಾಡುತ್ತಿದ್ದನು. " ನೀವು ಲೌಕಿಕ ಎಂದು ತಿಳಿದುಕೊಂಡಿರುವುದೆಲ್ಲವೂ ಪವಿತ್ರವೇ. ಮನುಷ್ಯರಾಗಲು ಕಲಿಯಿರಿ. ನಂತರ ಬೇಕಾದರೆ ದೇವತೆಗಳಾಗುವಿರಂತೆ. ಮೊದಲು ಸಜ್ಜನರಾಗಿ.." ಎಂದು ಅವನು ಉಪದೇಶಿಸುತ್ತಿದ್ದನು. **"ಅವನೇ ಅತ್ಯಂತ ಪ್ರಾಮಾಣಿಕ ನಾದ ಕನ್‌ಫ್ಯೂಶಿಯಸ್"** ಎಂದರು ಅಪ್ಪ.

ಅಲ್ಲಿಂದ ಮುಂದೆ ಕಂಡದ್ದು, ಸುಂದರವಾದ ಕಣಿವೆ. ನದಿ, ಸರೋವರ, ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶವದು. ಕಸ್ತೂರಿಯ ಪರಿಮಳ ಎಲ್ಲ ಕಡೆ ಹಬ್ಬಿತ್ತು. ಕೋಗಿಲೆಗಳು ಉಲಿಯುತ್ತಿದ್ದವು. ಅದೋ ದೂರದಿಂದ, ವೇದಪಾರಾಯಣದ ಮಧುರಧ್ವನಿ ಕೇಳಿ ಬರುತ್ತಿತ್ತು. ಅದೊಂದು ಆಶ್ರಮ, ಅಲ್ಲಿ ಋಷಿಗಳು ಗಂಭೀರವಾಗಿ ವೇದಾಧ್ಯಯನದಲ್ಲಿ ತೊಡಗಿದ್ದಾರೆ. **"ಇವರೇ ವೇದಕಾಲದ ಋಷಿಗಳು"** ಎಂದು ಉದ್ಗರಿಸಿದ ಗಣೇಶ.

ಮುಂದೆ ಹೋದಾಗ, ಯುದ್ಧಭೂಮಿಯೊಂದು ಕಾಣಿಸಿತು. ಅಲ್ಲಿ ಎರಡು ಸೈನ್ಯಗಳ ನಡುವೆ, ಬಿಳಿಯ ಕುದುರೆಗಳನ್ನು ಕಟ್ಟಿದ ಭವ್ಯ ರಥವೊಂದು ನಿಂತಿತ್ತು. ನವಿಲುಗರಿಯ ಕಿರೀಟವನ್ನು ಧರಿಸಿದ್ದ ದಿವ್ಯ ಪುರುಷನೊಬ್ಬ, ಕೈಜೋಡಿಸಿ ನಮಸ್ಕರಿಸಿದ್ದ ವೀರನೊಬ್ಬನಿಗೆ ಉಪದೇಶ ಮಾಡುತ್ತಿದ್ದ. **"ಇವರೇ ಕೃಷ್ಣ ಮತ್ತು ಅರ್ಜುನರು. ಕೃಷ್ಣ ಉಪದೇಶ ಮಾಡುತ್ತಿರುವುದು ಭಗವದ್ಗೀತೆಯನ್ನು"** ಎಂದು ಸಂತೋಷದಿಂದ ಉದ್ಗರಿಸಿದ ಗಣೇಶ.

ಮುಂದೆ ಹೋದಾಗ, ತೇಜಸ್ವಿಯಾದ ಸಂನ್ಯಾಸಿಯೊಬ್ಬರನ್ನು ಅವರು ಕಂಡರು. ವಿಭೂತಿ ಧರಿಸಿ, ಕಮಂಡಲು ಹಿಡಿದಿದ್ದ ಅವರ ಹಿಂದೆ ಶಿಷ್ಯರು ಬರುತ್ತಿದ್ದರು. ಅಪ್ಪ ಗಣೇಶನ ಕಿವಿಯಲ್ಲಿ ಪಿಸುಗುಟ್ಟಿದರು, **"ಇವರೇ ಹಿಂದೂ ಧರ್ಮಕ್ಕೆ ಹೊಸ ದಿಶೆಯನ್ನು ಕೊಟ್ಟ ಶ್ರೀಶಂಕರಾ ಚಾರ್ಯರು."** ಎಂದು.

ನಂತರ ಒಂದು ದೊಡ್ಡ ದೇವಸ್ಥಾನದ ಗೋಪುರ ಕಾಣಿಸಿತು, ಅಲ್ಲಿಂದ ಭಗವನ್ನಾಮ ಸಂಕೀರ್ತನವನ್ನು ಒಬ್ಬ ಮಹಾತ್ಮರು ಹೇಳಿ ಕೊಡುತ್ತಿದ್ದರು. ಜನರೆಲ್ಲ ಅದನ್ನು ಆಲಿಸುತ್ತಿದ್ದರು. **"ಇವರೇ ಶ್ರೀರಾಮಾನುಜಾಚಾರ್ಯರು"** ಎಂದರು ಅಪ್ಪ. ಮತ್ತೊಂದು ಕಡೆ ತಿರುಗಿದಾಗ, ಸಮುದ್ರದ ದಡದಿಂದ, ಶ್ರೀಕೃಷ್ಣನ ಸುಂದರ ಮೂರ್ತಿಯೊಂದನ್ನು ಹೊತ್ತುಕೊಂಡು, ಸ್ತೋತ್ರಪಾಠವನ್ನು ಹಾಡಿಕೊಂಡು ಬರುತ್ತಿದ್ದ ದೃಢಕಾಯದ ಮಹಾತ್ಮರನ್ನು ಕಂಡರು. **"ಇವರೇ ಶ್ರೀಮಧ್ವಾಚಾರ್ಯರು'** ಎಂದ ಗಣೇಶ.

ಮುಂದೆ ಹೋಗುತ್ತಿದ್ದಂತೆ, ಉತ್ತರ ಭಾರತದ ಸಂತರು, ಮಹಾರಾಷ್ಟ್ರದ ಸಂತರು, ತಮಿಳುನಾಡಿನ ಆಳ್ವಾರರು ಮತ್ತು ನಾಯನ್ಮಾರರು, ಕರ್ನಾಟಕದ ಶಿವಶರಣರು, ದಾಸರು – ಇವರೆಲ್ಲರ ಅಪೂರ್ವ ಲೋಕವೇ ಹರಡಿಕೊಂಡಿತ್ತು.

ಅದನ್ನೆಲ್ಲ ನೋಡಿದ ಗಣೇಶನಿಗೆ ಅವರ ತಂದೆ ಕೇಳಿದರು: "ಮಗೂ, ಜಗತ್ತಿನ ನಾಗರಿಕತೆಗಳನ್ನು ನೋಡಿದೆ; ಧರ್ಮಪ್ರಪಂಚವನ್ನೂ ನೋಡಿದೆ. ನಿನಗೆ ಏನನ್ನಿಸುತ್ತಿದೆ ಮಗು?" ಗಣೇಶ ಸ್ವಲ್ಪ ಹೊತ್ತು ಯೋಚಿಸಿ ಹೇಳಿದ: "ಅವರೆಲ್ಲರೂ ಮಾನವ ಜನಾಂಗಕ್ಕೇ ಸೇರಿದವರು, ಅಲ್ಲವೇನಪ್ಪಾ? ಅವರ ಕೊಡುಗೆಗಳೆಲ್ಲವೂ ನಮಗೆಲ್ಲರಿಗೂ ಸೇರಿದ್ದು. ಅವರ ಸಾಧನೆಗಳು ನಾವೆಲ್ಲರೂ ಹೆಮ್ಮೆ ಪಡುವಂಥದ್ದು." ಅವರಿಬ್ಬರೂ ಮುಂದೆ ಹೋಗಿ ಇನ್ನೊಂದು ಬಾಗಿಲನ್ನು ಪ್ರವೇಶಿಸಿದರು. ಅಲ್ಲಿ ದೊಡ್ಡದೊಂದು ದೇವಸ್ಥಾನ. ಅಲ್ಲಿನ ತೋಟದಲ್ಲಿ ಗಡ್ಡ ಬಿಟ್ಟಿರುವ ವೃದ್ಧರೊಬ್ಬರು ಅಡ್ಡಾಡುತ್ತಿದ್ದಾರೆ. ನಂತರ ಬಂದು ತಮ್ಮ ಕೊಠಡಿಯಲ್ಲಿ ಕುಳಿತುಕೊಂಡರು. ಅನೇಕ ಯುವಕರು, ವಯಸ್ಸಾದವರು ಅವರ ಸುತ್ತಲೂ ಸೇರಿದರು. ಅವರು ಹೇಳುತ್ತಿದ್ದರು: **"ಭಗವಂತನೇ ಈ ಜಗತ್ತಿನಲ್ಲಿರುವ ಎಲ್ಲ ಧರ್ಮಗಳನ್ನೂ ಸೃಷ್ಟಿಸಿದ್ದಾನೆ. ನಾನೇ ಸಾಧನೆ ಮಾಡಿ ತಿಳಿದು ಕೊಂಡಿದ್ದೇನೆ. ಅವೆಲ್ಲವೂ ಭಗವಂತನ ಕಡೆಗೆ ನಮ್ಮನ್ನು ಕರೆದುಕೊಂಡು ಹೋಗುವ ಬೇರೆ ಬೇರೆ ಮಾರ್ಗಗಳು. ಯಾವುದಾದರೂ ಮಾರ್ಗವನ್ನು ಹಿಡಿದು ವ್ಯಾಕುಲತೆಯಿಂದ ಭಗವಂತನನ್ನು ಕೂಗಿ ಕರೆಯಬೇಕು. ನಾವು ಪ್ರತಿಯೊಬ್ಬ ಜೀವಿಯಲ್ಲಿಯೂ ಶಿವನನ್ನು ನೋಡುತ್ತ, ಸೇವೆ ಮಾಡಬೇಕು."** ಗಣೇಶನ ಅಪ್ಪ ಹೇಳಿದರು: " ಮಗೂ, ನೀನು ಇಷ್ಟು ನೋಡಿದೆಯಲ್ಲ. ಇದರಿಂದ ಕಲಿಯಬೇಕಾದ ಪಾಠವನ್ನು ಈಗ ಕೇಳಿದೆ. ಇವರು **ರಾಮಕೃಷ್ಣ ಪರಮಹಂಸರು.** ಎಲ್ಲ ಧರ್ಮಗಳ ಸಾರವನ್ನೂ ತಮ್ಮ ಜೀವನದಲ್ಲಿ **ಮೂಡಿಸಿಕೊಂಡವರು.** ಜಗತ್ತಿನ ಎಲ್ಲ ನಾಗರಿಕತೆಗಳೂ, ಧರ್ಮಗಳೂ ಸತ್ಯವನ್ನೇ ಹುಡುಕುತ್ತಿವೆ, ಅವುಗಳ ಗುರಿ ಒಂದೆ ಎಂದು ತಮ್ಮ ಜೀವನದಲ್ಲಿ ತೋರಿಸಿದ ಮಹಾತ್ಮರು."

ಗಣೇಶ ಮತ್ತು ಅವರ ಅಪ್ಪ ವಸ್ತುಪ್ರದರ್ಶನ ನೋಡಿ ಹೊರ ಬಂದಾಗ, ಆಗಲೇ ರಾತ್ರಿ ಎಂಟು ಗಂಟೆಯಾಗಿತ್ತು. ಹಸಿವು ಕಾಡ ತೊಡಗಿತ್ತು. ಇನ್ನೇನು, ಮನೆಗೆ ಹೋಗಿ ಊಟ ಮಾಡುವುದು, ಅಲ್ಲವೆ?

ಈ ಪ್ರಶ್ನೆಗಳಿಗೆ ನೀವೇ ಉತ್ತರ ಕಂಡುಕೊಳ್ಳಿ: ೧. ವಸ್ತುಪ್ರದರ್ಶನದ **ಹೆಸರೇನು? ೨. ಗಣೇಶ ನೋಡಿದ ನಾಗರಿಕತೆಗಳ ದೃಶ್ಯಗಳು ಯಾವುವು, ಅವುಗಳ ವೈಶಿಷ್ಟ್ಯವೇನು?** ೩.ಧರ್ಮ ಪ್ರಪಂಚದಲ್ಲಿ ನೋಡಿದ ಮಹಾ **ಪುರುಷರು ಯಾರು ಯಾರು? ೪. ಮೂರು ಜನ ಆಚಾರ್ಯರು ಯಾರು?** ೫. ಇಡೀ ವಸ್ತುಪ್ರದರ್ಶನವನ್ನು ನೋಡಿ ಕಲಿಯಬೇಕಾದ ಪಾಠವನ್ನು **ಹೇಳಿಕೊಟ್ಟದ್ದು ಯಾರು?** ಆ ಪಾಠ ಏನು?

ವಿದ್ಯಾರ್ಥಿಯು ಮಾಡಬೇಕಾದ ಪ್ರತಿಜ್ಞೆಗಳನ್ನು ಮಂತ್ರರೂಪದಲ್ಲಿ ಸ್ವಾಮಿ ನಿರ್ವೇದಾನಂದಜಿ ಎಂಬ ಹಿರಿಯ ಸಂನ್ಯಾಸಿಗಳು ಬರೆದಿದ್ದಾರೆ. ಅವು ಗಳನ್ನು ಬಳಸಿಕೊಂಡು **'ವಿದ್ಯಾರ್ಥಿ ಹೋಮ'** ಎಂಬ ಆಚರಣೆಯನ್ನೂ ಮಾಡುವರು. ಆ ಮಂತ್ರಗಳ ಸರಳ ನಿರೂಪಣೆ ಮತ್ತು ಮಹತ್ವವನ್ನು ಆಗಸ್ಟ್ ತಿಂಗಳ ಸಂಚಿಕೆಯಿಂದ ಪ್ರಕಟಿಸುತ್ತಿದ್ದೇವೆ. ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾದ, ಅವರ ಜೀವನಕ್ಕೆ ದಾರಿದೀಪವಾಗಬಲ್ಲ ನಿಯಮಗಳ ಪರಿಚಯವುಳ್ಳ ಈ ಮಂತ್ರಗಳನ್ನು ಓದಿ, ಮನನ ಮಾಡಿ. –ಸಂ.